ಸಂಸ್ಥೆಯಲ್ಲಿ ಹೆಗಡೆಯವರ ಪತ್ನಿರದ ನೆಂಟರಿದ್ದಾರೆಂದು ಆಪಾದಿಸಲಾಗಿದ್ದು, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯವರೆಗೆ ಯಾವುದೇ ವಿವರಣೆ ನೀಡಿರುವುದಿಲ್ಲ. ಪರದಿಯಾಗಿರುವ ಮಾಹಿತಿಯಂತೆ ಸದನದಲ್ಲಿ ಸಂಪೂರ್ಣವಾದಂತಹ ವಿವರಕೊಟ್ಟು ಸತ್ಯಾಸತ್ಯದ ಬಗ್ಗೆ ಹಾಗೂ ವಿನಾ ಕಾರಣ ವಾಗಿ ಆರೋಪ ಪ್ರತ್ಯಾರೋಪಗಳನ್ನು ಚರ್ಚೆ ಮಾಡದೆ ಸಂಪೂರ್ಣವಾದಂತಹ ವಿಷಯದ ಹಿನ್ನೆಲೆಯನ್ನು ಕೇಂದ್ರ ತನಿಖಾ ದಳಕ್ಕೆ ಒಪ್ಪಿಸಲು ಹಿಂದೇಟು ಹಾಕುತ್ತಿರುವುದು ನಿಜವೆ? ಎರಡು ಕೋಟಿ ಇಪ್ಪತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಪರ್ಗಾಪಣೆ ಮಾಡುವಾಗ ಕೇವಲ ೯೦ ಲಕ್ಷ ರೂಪಾಯಿ ಗಳೆಂದು ನಮೂದಿಸಿರುವುದರಿಂದಾಗಿ ಸರ್ಕಾರಕ್ಕೆ ೧೫ ಲಕ್ಷ ರೂಪಾಯಿ ಸ್ಟ್ಯಾಂಪ್ ಡ್ಯೂಟಿಯಲ್ಲಿ ನಷ್ಟವಾಗಿರುವುದೂ ನಿಜವಲ್ಲದೆ ಹಾಗೂ ರೇವಜೀತು ಬಿಲ್ಡರ್ಸ್ ಸಂಸ್ಥೆಯ ಪರವಾಗಿ ಸಹಿ ಹಾಕಿರುವ ಶ್ರೀಮತಿ ಶೋಭಾ ಮುಖೀಜ ಎಂಬುವರ ಮಾನ್ಯ ಮುಖ್ಯ ಮಂತ್ರಿಗಳ ದೊಡ್ಡ ಅಳಿಯಂದಿರ ತಂಗಿ, ಇದು ನಿಜವಲ್ಲವೇ ಎನ್ನುವುದನ್ನು ಈ ಸಭೆಗೆ ತಿಳಿಸಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ಈ ಬಗ್ಗೆ ಸದನದಲ್ಲಿ ಮುಖ್ಯ ಮಂತ್ರಿಗಳು ವಿವರವಾದ ಹೇಳಿಕೆ ನೀಡಬೇಕಾಗಿ ಆಗ್ರಹ ಪಡಿಸುತ್ತೇನೆ. ಕಾಲಾವಕಾಶ ಕೊಟ್ಟರೆ ನನ್ನಲ್ಲಿ ಇರತಕ್ಕ ಸಾಕ್ಷಾಧಾರಗಳನ್ನು ಸಭೆಯ ಮುಂದಿಡಲು ಆಶಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ತಿರಿಸಿಕೊಡು ತ್ತೇನೆ.

ಶ್ರೀ ಬಿ. ಲಕ್ಕಪ್ಪ,—ಸ್ವಾಮಿ, ಮಂತ್ರಿಗಳು ಹೀಗೆ ಹೇಳಿದರೆ ಏನು ಮಾಡುವುದು. ಕಾಲವಕಾಶ ಇಲ್ಲದೆ ಇರುವುದರಿಂದ ಸಿಸಿಳರ ಕೆಳಗೆ ಈ ವಿಷಯವನ್ನು ತಂದಿದ್ದೇನೆ.

ಅಧ್ಯಕ್ಷರು.—ಸಿಸಿಳರ ನಿಯಮದ ಪ್ರಕಾರ ಉತ್ತರ ಕೊಡಲೇ ಬೇಕೆಂದು ಕಂಪ್ಲೇಟ್ ಮಾಡು ವುದಕ್ಕಾಗುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ರಾಜ್ಯದ ಮುಖ್ಯ ಮಂತ್ರಿಗಳ ಹೆಸರಿಗೆ ಕಳಂಕ ತರತಕ್ಕಂಥ ಸಂದ್ಧಿ ಬಂದಿದೆ.

ಅಧ್ಯಕ್ಷರು.—ತಾವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಸಿಸಿಳರ ಕೆಳಗೆ ವಿಷಯವನ್ನು ಎತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಬೇರೆ ನೋಟೀಸ್ ಕೊಡಿ, ಸಿಸಿಳರಲ್ಲಿ ಉತ್ತರ ಸಿಗುವುದಿಲ್ಲ. ಬೇಕಾದರೆ ಅರ್ಧ ಕಾಸಿನ ಚರ್ಚೆಗೆ ಹಾಕಿ

(ಗೊಂದಲ)

7) ಸಿರಸಿ ಸಿದ್ದಾಪುರ ತಾಲ್ಲೂಕಿನ ರೈತರಿಗೆ ನೀರು ಕೊಡದೆ ತೆರಿಗೆಯನ್ನು ವಸೂಲಿ ಮಾಡುತ್ತಿರುವುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಿಸಿ. ಸಿದ್ದಾಪುರ. ತಾಲ್ಲೂಕಿನ ರೈತರಿಗೆ ನೀರನ್ನೇ ಕೊಡದೆ ಸಾವಿರಗಟ್ಟಲೆಯಲ್ಲಿ ನೀರು ತೆರಿಗೆಯನ್ನು ವಸೂಲು ಮಾಡುತ್ತಿದ್ದು ಅವರಿಗೆ ಬಹಳ ಅನ್ಯಾಯ ವಾಗಿದೆ, ಈ ಬಗ್ಗೆ ಅವರಿಗೆ ನೋಟೀಸು ಕೊಡಲಾಗಿದೆ. ಈ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಈ ರೀತಿ ವಸೂಲು ಮಾಡುತ್ತಿರುವುದನ್ನು ತಡೆಗಟ್ಟಿ ರೈತರಿಗಾಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಸರಕಾರವನ್ನು ಒತ್ತಾಯಿಸು ತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬೊಮ್ಮಾಯಿಯವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಅದನ್ನು ಬಿಟ್ಟು ಬೇರೆ ಉತ್ತರ ಕೊಡುವುದದಕ್ಕಾಗುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಿಸಿಳರ ಕೆಳಗೆ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಒಬ್ಬರೇ ಒಬ್ಬರು ಮಂತ್ರಿಗಳು ಉತ್ತರ ಕೊಡುವುದಿಲ್ಲ.